192 ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ)
ಜಿ.ಕರುಣಾಕರ ರೆಡ್ಡಿ(ಕಂದಾಯ ಸಚಿವರು)

ಅ) ಸರ್ಕಾರವು ರೈತರು ಕೊಡುತ್ತಿರುವ ಪಹಣಿಗಳ ಬೆಲೆಯನ್ನು ಎಷ್ಟಕ್ಕೆ ನಿಗದಿಪಡಿಸಲಾಗಿದೆ.

ಪಹಣಿಗೆ ರೂ.15/– ಬೆಲೆ ನಿಗದಿಪಡಿಸಲಾಗಿದೆ

ಆ) ನಿಗದಿಪಡಿಸಿದ್ದಲ್ಲಿ, ರೈತರ ಹಿತಕಾಯುವ ದೃಷ್ಟಿಯಿಂದ ಬೆಲೆಯನ್ನು ಕಡಿಮೆ ಮಾಡುವ ಚಿಂತನೆ ಸರ್ಕಾರದ ಮುಂದಿದೆಯೇ?

ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ

ಇ) ಹಾಗಿದ್ದಲ್ಲಿ, ಬೆಲೆ ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉದ್ಭವಿಸುವುದಿಲ್ಲ

<u>ಕರ್ನಾಟಕ ವಿಧಾನ ಸಭೆ</u>

193 ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ)

ಅ) ಚಿಳ್ಳಕೆರೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ತುರವನೂರು ಹೋಬಳಿಗೆ ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ನೀರು ಸರಬರಾಜು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಯ ಒಟ್ಟಾರೆ 2,54,023 ಎಕರೆ ಪ್ರದೇಶಗಳು ನೀರಾವರಿಯಾಗಲಿದ್ದು, ಇದರಲ್ಲಿ ತುರುವನೂರು ಹೋಬಳಿಯ ಕೆಲವು ಗ್ರಾಮಗಳ ಜಮೀನುಗಳು ಸೇರಿರುತ್ತವೆ.

ಆ) ಈ ಕಾಮಗಾರಿಯು ಈಗ ಯಾವ ಹಂತದಲ್ಲಿದೆ; ಕಾಮಗಾರಿಯು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು; ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಭದ್ರಾ ಮೇಲ್ದಂಡೆ ಯೋಜನೆಯು ಪ್ರಾರಂಭಿಕ ಹಂತದಲ್ಲಿದ್ದು, ಪ್ರಾರಂಭದ ಮೂರು ಪ್ಯಾಕೇಜ್‌ಗಳ ಗುತ್ತಿಗೆಯನ್ನು ನೀಡಲಾಗಿದೆ. ಇದರಲ್ಲಿ ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ 15 ಟಿ.ಎಂ.ಸಿ. ನೀರೆತ್ತುವ (ಪ್ಯಾಕೇಜ್ –1), ಭದ್ರಾ ಜಲಾಶಯದಿಂದಅಜ್ಜಂಪುರ ಸುರಂಗದವರೆಗೆ 21.50 ಟಿ.ಎಂ.ಸಿ. ನೀರೆತ್ತುವ (ಪ್ಯಾಕೇಜ್ –2) ಮತ್ತು 6.9 ಕಿ.ಮೀ. ಉದ್ದದ ಸುರಂಗ ಕಾಮಗಾರಿಗಳು (ಪ್ಯಾಕೇಜ್ –3) ಇರುತ್ತವೆ. ಈ ಮೂರು ಪ್ಯಾಕೇಜ್‌ಗಳ ಡಿ.ಪಿ.ಆರ್.ಗಳನ್ನು ಗುತ್ತಿಗೆದಾರರು ಸಲ್ಲಿಸಿದ್ದು, ಇವುಗಳಿಗೆ ಅನುಮೋದನೆ ನೀಡುವ ಪ್ರಕ್ರಿಯೆಗಳು ಪ್ರಗತಿಯಲ್ಲಿರುತ್ತವೆ. ಸುರಂಗದ ನಂತರದ ಚಿತ್ರದುರ್ಗ ಶಾಖಾ ಕಾಲುವೆಯ ಪ್ಯಾಕೇಜ್‌ವಾರು ಅಂದಾಜು ಪಟ್ಟಿಗಳ ತಯಾರಿಕಾ ಕಾರ್ಯವು ಪ್ರಗತಿಯಲ್ಲಿದ್ದು, ಮೊದಲ ಎರಡು ಪ್ಯಾಕೇಜ್‌ಗಳ ಅಂದಾಜುಗಳನ್ನು ಈಗಾಗಲೇ ತಯಾರಿಸಲಾಗಿದೆ.

ಭದ್ರಾ ಮೇಲ್ದಂಡೆ ಯೋಜನೆಯನ್ನು ಐದು ವರ್ಷಗಳಲ್ಲಿ ಅನುಷ್ಠಾನ ಗೊಳಿಸುವ ಗುರಿ ನಿಗದಿಪಡಿಸಲಾಗಿದೆ.

ಇ) ಈ ಯೋಜನೆಯಡಿಯಲ್ಲಿ ತುರವನೂರು ಹೋಬಳಿಗೆ ಎಷ್ಟು ಪ್ರಮಾಣದ ನೀರನ್ನು ಸರಬರಾಜು ಮಾಡಲಾಗುವುದು?

ಚುತ್ರದುರ್ಗ ಶಾಖಾ ಕಾಲುವೆಯಲ್ಲಿ ನೀರಾವರಿಗಾಗಿ 15.90 ಟಿ.ಎಂ.ಸಿ. ನೀರನ್ನು ಬಳಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಮಾಡಲಾಗಿರುವ ಪೂರ್ವಭಾವಿ ಅಧ್ಯಯನದಂತೆ, ತುರುವನೂರು ಹೋಬಳಿಯ ಬೆಳಗಟ್ಟ, ಬಗ್ಗಲರಂಗವ್ವನಹಳ್ಳಿ, ಹಾಯ್ಕಲ್ಲು, ಬಾಗೇನಾಳ್, ಚಿಕ್ಕಜಗಲೂರು ಮತ್ತು ರಾಗಲೊಬನಹಳ್ಳಿಯ ಕೆಲವು ಪ್ರದೇಶಗಳು ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ನೀರಾವರಿಗೆ ಒಳಪಡುತ್ತವೆ. ಸದರಿ ಪ್ರದೇಶಗಳು ಚಿತ್ರದುರ್ಗ ಶಾಖಾ ಕಾಲುವೆಯ ಕೊನೆಯ ಹಂತದಲ್ಲಿ ಬರುತ್ತವೆ. ಅಚ್ಚುಕಟ್ಟು ಪ್ರದೇಶಗಳ ವಿವರವಾದ ಸರ್ವೆ ಕಾರ್ಯವನ್ನು ಇನ್ನೂ ಕೈಗೆತ್ತಿಕೊಂಡಿಲ್ಲ. ಸರ್ವೆಕಾರ್ಯವು ಸಂಪೂರ್ಣಗೊಂಡು, ಈ ಅಚ್ಚುಕಟ್ಟು ಪ್ರದೇಶಗಳ ವಿಸ್ತೀರ್ಣವನ್ನು ಅಂತಿಮಗೊಳಿಸಿದ ನಂತರ, ನೀರಿನ ಪ್ರಮಾಣದ ವಿವರವನ್ನು ತಿಳಿಸಲು ಸಾಧ್ಯವಾಗುವುದು.

ಜಸಂಇ 23 ಡಬ್ಲ್ಯೂಎಲ್‌ಎ 2009

(ಬಸವರಾಜು ಬೊಮ್ಮಾಯಿ)
ಜಲ ಸಂಪನ್ಮೂಲ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

348 ಶ್ರೀ ವಸಂತ ಬಂಗೇರ.ಕೆ.
ಮಾನ್ಯ ಕಂದಾಯ ಸಚಿವರು.

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಈವರೆವಿಗೂ ಅಕ್ರಮ-ಸಕ್ರಮ ಸಮಿತಿ, ಆರಾಧನ ಸಮಿತಿ, ಆಶ್ರಯ ಸಮಿತಿ ಹಾಗೂ ಇನ್ನಿತರ ಸಮಿತಿಗಳು ರಚನೆಯಾಗಿರುವುದಿಲ್ಲ, ಇದಕ್ಕೆ ಕಾರಣವೇನು;

ಅನಧಿಕೃತ ಸಾಗುವಳಿಯನ್ನು ಸಕ್ರಮಿಕರಣಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94ಎ ಮತ್ತು 94ಬಿ ರಡಿ ನಮೂನೆ 50, 53ರಲ್ಲಿ ಸಲ್ಲಿಸಿದ ಅರ್ಜಿಗಳನ್ನು ವಿಲೇವಾರಿ ಮಾಡಲು ಕಾಯ್ದೆಯಲ್ಲಿ ಕಲ್ಪಿಸಿದ್ದ ಕಾಲಾವಧಿಯು ದಿ:26.04.2008ಕ್ಕೆ ಮುಕ್ತಾಯಗೊಂಡಿರುತ್ತದೆ. ಈ ಅವಧಿಯನ್ನು ಮುಂದುವರೆಸಲು ಕಾಯ್ದೆಗೆ ತಿದ್ದುಪಡಿ ತರಲು ವಿಧೇಯಕವನ್ನು ಪ್ರಸ್ತುತ ನಡೆಯುವ ವಿಧಾನ ಮಂಡಲದ ಅಧವೇಶನದಲ್ಲಿ ಮಂಡಿಸಲಾಗುತ್ತದೆ. ಕಾಯ್ದೆಗೆ ತಿದ್ದುಪಡಿ ಆದೇಶ ಜಾರಿಗೆ ಬಂದ ನಂತರ ಅಕ್ರಮ-ಸಕ್ರಮ ಸಮಿತಿಗಳನ್ನು ರಚಿಸಲಾಗುವುದು.